OS 29/2023
PW-02

<u>ದಿನಾಂಕಃ 23-04-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ 3 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ SVK ಮಾನ್ಯ ವಕೀಲರಿಂದಃ</u>**

ನನ್ನ ಮೂಲ ಊರು ಖಾನಾಪೂರ ಎಂದರೆ ಸರಿ. ದಾವಾ ಸ್ವತ್ತು ದಿಗ್ಗಿ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ಖಾನಾಪೂರದಿಂದ ದಿಗ್ಗಿ ಗ್ರಾಮಕ್ಕೆ ಸುಮಾರು 20 ರಿಂದ 25 ಕಿ.ಮೀ. ಅಂತರ ಇರುತ್ತದೆ. ನನಗೆ ದಾವಾ ಸ್ವತ್ತುಗಳ ಜಮೀನು ಹಾಗೂ ಮನೆಯ ಬಗ್ಗೆ ತಿಳಿದಿರುತ್ತದೆ. ನನಗೆ ಪ್ರತಿವಾದಿ 3 ಹಾಗೂ ಶ್ರೀ ದೊಡ್ಡಮಾನಯ್ಯ ಎನ್ನುವವರ ಪರಿಚಯ ಇರುತ್ತದೆ. ಸದರಿ ದೊಡ್ಡಮಾನಯ್ಯ ಇವರು ಶಹಾಪೂರಿನಲ್ಲಿ ವಾಸ ಮಾಡುತ್ತಾರೆ. ಸದರಿ ದೊಡ್ಡ ಮಾನಯ್ಯ ಇವರ ವಯಸ್ಸು 50 ಇರುತ್ತದೆ. ಸದರಿ ದೊಡ್ಡ ಮಾನಯ್ಯ ಇವರು ಶಹಾಪೂರಿನ ಗಂಗಾನಗರದಲ್ಲಿ ವಾಸ ಮಾಡುತ್ತಾರೆ. ಸದರಿ ದೊಡ್ಡ ಮಾನಯ್ಯ ಇವರು ಈಗ ಯಾವ ಉದ್ಯೋಗವನ್ನು ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

2. 3 ನೇ ಪ್ರತಿವಾದಿಯೂ ಕೂಡಾ ಶಹಾಪೂರಿನ ಗಂಗಾನಗರದಲ್ಲಿ ವಾಸ ಮಾಡುತ್ತಾರೆ. 3 ನೇ ಪ್ರತಿವಾದಿಯ ವಯಸ್ಸು ಈಗ ಸುಮಾರು 65 ಇರುತ್ತದೆ. ಸದರಿ 3 ನೇ ಪ್ರತಿವಾದಿಯು ಈಗ ಯಾವುದೇ ಉದ್ಯೋಗವನ್ನು ಮಾಡಿಕೊಂಡಿರುವುದಿಲ್ಲ. 3 ನೇ ಪ್ರತಿವಾದಿ ಹಾಗೂ ಸದರಿ ದೊಡ್ಡ ಮಾನಯ್ಯ ಇವರುಗಳ ನಡುವೆ ಆಗಿರುವ ವ್ಯವಹಾರದ ಮಾತುಕತೆಯ ಸಂದರ್ಭದಲ್ಲಿ ನಾನು ಹಾಜರಿದ್ದೆ. ಸದರಿಯವರಿಬ್ಬರ ನಡುವೆ ವ್ಯವಹಾರದ ಬಗ್ಗೆ ಕಾಗದ ಪತ್ರ ಆಗಿದ್ದು ಆದರೆ ನಾನು ಅದಕ್ಕೆ ಸಹಿ ಮಾಡಿರುವುದಿಲ್ಲ. ಸದರಿ ಕಾಗದ ಪತ್ರವನ್ನು 3 ನೇ ಪ್ರತಿವಾದಿ ಹಾಗೂ ಸದರಿ ದೊಡ್ಡ ಮಾನಯ್ಯ ಇವರಿಗೆ 1 ಮತ್ತು 2 ನೇ ಪ್ರತಿವಾದಿಗಳು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕಾಗದ ಪತ್ರ sub

registrar ಇವರ ಕಚೇರಿಯಲ್ಲಿ ನೋಂದಣಿಯಾಗುವವರೆಗೂ ನಾನು ಹಾಜರಿದ್ದೆ ಆದರೆ ಅದು ಮೋಸದಿಂದ ಆಗಿರುತ್ತದೆ. ನನಗೆ ಸದರಿ ದಿನದಂದು sub registrar ಕಚೇರಿಗೆ 1 ನೇ ಪ್ರತಿವಾದಿ ಕರೆದುಕೊಂಡು ಹೋಗಿರುತ್ತಾರೆ. ನಾನು sub registrar ಕಚೇರಿಗೆ ಹೋಗುವ ಮುಂಚಿತವಾಗಿ ಸದರಿ ಕಾಗದ ಪತ್ರ ಮೋಸದಿಂದ ಕೂಡಿರುತ್ತದೆ ಎಂದು ನನಗೆ ತಿಳಿದಿತ್ತು. ಸದರಿ ಕಾಗದ ಪತ್ರ ಮೋಸದಿಂದ ಕೂಡಿರುತ್ತದೆ ಎಂದು ಹೇಳಿ ನಾನಾಗಲೀ ಅಥವಾ 1 ನೇ ಪ್ರತಿವಾದಿಯಾಗಲೀ sub registrar ಇವರಿಗೆ ಯಾವುದೇ ಅರ್ಜಿಯನ್ನು ಕೊಟ್ಟಿರುವುದಿಲ್ಲ. 1 ನೇ ಪ್ರತಿವಾದಿಗೆ ಗುಡಿಯ ಪೂಜಾರಿಕೆ ಕೆಲಸ ಬಿಡಿಸುವುದಾಗಿ ಬೆದರಿಕೆ ಹಾಕುತ್ತಿದ್ದರು ಎಂದ ಹೇಳಿ ನಾನಾಗಲೀ ಅಥವಾ 1 ನೇ ಪ್ರತಿವಾದಿಯಾಗಲೀ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುವುದಿಲ್ಲ. ನಾನು BA ಪದವೀಧರ. ನಾನು LIC ಯಲ್ಲಿ ಸುಮಾರು 20 ವರ್ಷಗಳವರೆಗೆ ಸಹಾಯಕನೆಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಸದರಿ ದಿನದಂದು sub registrar ಕಚೇರಿಯಲ್ಲಿ ನಾನು ಇರುವ ಪ್ರಸಂಗ ಬರದೇ ಇದ್ದರೂ ಕೂಡಾ ಸದರಿ ದಾಖಲೆ ಮೋಸದಿಂದ ಕೂಡಿರುತ್ತದೆ ಹಾಗೂ 3 ನೇ ಪ್ರತಿವಾದಿ ಹಾಗೂ ಸದರಿ ದೊಡ್ಡ ಮಾನಯ್ಯ ಇವರು 1 ನೇ ಪ್ರತಿವಾದಿಗೆ ಗುಡಿ ಪೂಜಾರಿಕೆಯಿದ ತೆಗೆದು ಹಾಕುವುದಾಗಿ ಬೆದರಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು LIC ಯಲ್ಲಿ ಕೆಲಸವನ್ನು ಮಾಡುತ್ತಿದ್ದಾಗ ಸುಮಾರು ಪ್ರಕರಣಗಳು ನ್ಯಾಯಾಲಯದಲ್ಲಿದ್ದವು ಎಂದರೆ ಸರಿ. ಸದರಿ ಎಲ್ಲಾ ಪ್ರಕರಣಗಳು ನನ್ನ ಆಸ್ತಿಯ ಬಗ್ಗೆ ಇದ್ದವು ಎಂದರೆ ಸರಿ. ನನ್ನ ಮೇಲೆ ಸಲ್ಲಿಸಿರುವ ಪ್ರಕರಣಗಳಲ್ಲಿ  ಹಾಗೂ ನಾನು ಸಲ್ಲಿಸಿರುವ ಪ್ರಕಣಗಳಲ್ಲಿ ಸಾಕ್ಷಿಯ್ನು ಹೇಳಿರುತ್ತೇನೆ ಎಂದರೆ ಸರಿ.

3. ಸಾಕ್ಷಿಗೆ ಈಗ ನಿಪಿ.4 ಮತ್ತು 5 ರ ದಾಖಲೆಗಳು ಕಾನೂನಿನ ಪ್ರಕಾರ ಆಗಿರುತ್ತವೆ ಎಂದು ಹೇಳಿದಕ್ಕೆ ಸಾಕ್ಷಿ ಮೋಸದಿಂದ ಕೂಡಿರುತ್ತದೆ ಎಂದು ಹೇಳುತ್ತಾರೆ. ನಾನು ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಸವನ್ನು ಮಾಡಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ

ವಿಚಾರಣೆಯ ಒಕ್ಕಣಿಗಳನ್ನು ನನಗೆ ನನ್ನ ಮಾನ್ಯ ವಕೀಲರು ತಿಳಿಸಿರುತ್ತಾರೆ. ನನಗೆ ಪ್ರಸ್ತುತ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮ್ಮ ಪ್ರಾಪಂಚಿಕ ಅಡಚಣೆಗಾಗಿ 3 ನೇ ಪ್ರತಿವಾದಿ ಹಾಗೂ ಸದರಿ ದೊಡ್ಡ ಮಾನಯ್ಯ ಇವರಿಗೆ ತಲಾ 10 ಗುಂಟೆ ಜಮೀನನ್ನು ನಿಪಿ.4 ಮತ್ತು 5 ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಅದಕ್ಕಾಗಿ 1 ಮತ್ತು 2 ನೇ ಪ್ರತಿವಾದಿಗಳು ಅವರಿಂದ ಮುಗಂಡ ಹಣ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ ಪರ ಮಾನ್ಯ ವಕೀಲರು ಗೈರು ಹಾಜರಾಗಿದ್ದರಿಂದ ಅವರಿಂದ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.